ಅವರ ಸ್ವಾಧೀನ ಇದೆ ಎಂದು ಜನ ಹೇಳುತ್ತಾರೆ' ಎಂದಳು.

ರಾಯರು ನಿಟ್ಟುಸಿರು ಬಿಟ್ಟರು. 'ಒಂದು ಕಾಲದಲ್ಲಿ ನಮ್ಮ ಈ ಸಿಟಿಯಲ್ಲಿ ಅದಕ್ಕೆ ನಂಬರ್ ಒಂದು ಎಂಬ ಹೆಸರಿತ್ತು. ಆ ಕಾರಣದಿಂದಲೇ ನನಗೆ ನಮ್ಮ ಸದಾಶಿವ ಶೆಟ್ಟರ ಪರಿಚಯವಾದದ್ದು' ಎನ್ನುವುದನ್ನು ವಿವರಿಸಿ, 'ನಮ್ಮ ಸದಾಶಿವ ಶೆಟ್ಟರು ತುಂಬಾ ಪ್ರಾಮಾಣಿಕ, ಅಷ್ಟೇ ಅಲ್ಲ, ಜಂಟಲ್‌ಮನ್ ಅಂತಾರಲ್ಲ – ಅಂಥ ವ್ಯಕ್ತಿತ್ವದವರು. ಬಟ್ ಅದೃಷ್ಟಹೀನ. ಈಗ ಅವರು ಹಿಂದೆ ಸಂಪಾದಿಸಿ ಇಟ್ಟಿದ್ದರಲ್ಲೇ ಜೀವನ ನಿರ್ವಹಣೆ ಮಾಡಬೇಕು ಎಂಬಂತಾಗಿದ್ದಾರೆ' ಎಂದು ವಿಷಾದಿಸಿದರು.

ಮಾತುಕತೆ ಹಾಗೇ ಮುಂದುವರಿದು, ರಾಯರು ತಮ್ಮ ಹಿಂದಿನ ಸಹೋದ್ಯೋಗಿಗಳೆಲ್ಲ ಎಲ್ಲೆಲ್ಲಿ ಇದ್ದಾರೆ, ಅವರ ಕುಟುಂಬ ಜೀವನ ಹೇಗಿದೆ ಇತ್ಯಾದಿಗಳ ಸುತ್ತ ಮಾತು ಹರಿಸಿದರು. ಜಯಂತಿ ತನ್ನ ಗಮನದಲ್ಲಿರುವುದನ್ನೆಲ್ಲ ಹೇಳಿ, 'ಗಂಟೆ ಎಂಟಾಯಿತು ನೋಡಿ. ನೀವು ಕತೆಗಳನ್ನು ಪೂರ್ತಿ ಓದಿ ಆಗಿಲ್ಲ ಅಂತ ಕಾಣುತ್ತದೆ. ನೀವು ಅದನ್ನು ಮುಂದುವರಿಸಿ, ನಾನು ಅಡುಗೆಮನೆಗೆ ಹೋಗಬೇಕು' ಎಂದು ರಾತ್ರೆಯ ಅಡುಗೆಯ ಕಡೆಗೆ ಗಮನಕೊಟ್ಟಳು.

ರಾಯರು ಊಟಕ್ಕೇಳುವಾಗ ಕೊನೆಗೆ ಓದುವುದು ಎಂದು ಇಟ್ಟುಕೊಂಡಿದ್ದ ಎರಡು ಕತೆಗಳನ್ನು ಬಿಟ್ಟು ಮಿಕ್ಕವುಗಳನ್ನು ಓದಿ ಮುಗಿಸಿದರು. ಊಟದ ನಡುವೆ ಅವರು ಆ ಕತೆಗಳ ಬಗ್ಗೆ ಮಾತನಾಡಲು ಪ್ರಾರಂಭಿಸಿ, 'ನೀನು ಕೊಟ್ಟ ಎಲ್ಲಾ ಕತೆಗಳಲ್ಲಿ ನಿಜಕ್ಕೂ ಕಳಪೆ ಅನ್ನುವವುಗಳು ಇಲ್ಲ. ಒಳ್ಳೆ ಭರವಸೆಯ ಕತೆಗಾರರು ಇದ್ದ ಹಾಗೆ ಇದೆ' ಎಂದರು.

ಜಯಂತಿ 'ಗುಡ್. ನೀವು ಇಷ್ಟು ಹೇಳಿದರೆ ಸಾಕು. ನಾನು ಕೊಟ್ಟ ಯೋಜನೆಗೆ ಗರಿಮೂಡಿದ ಹಾಗೇ ಆಗುತ್ತದೆ' ಎಂದು ನಕ್ಕು, 'ನನ್ನ ತಿಳಿವಳಿಕೆಯಲ್ಲಿ ಶ್ರೀಕೃಷ್ಣ ಆಲನಹಳ್ಳಿ, ಮೊಗಳ್ಳಿ ಗಣೇಶ್ ಅವರೆಲ್ಲ ತಮ್ಮ ವಿದ್ಯಾರ್ಥಿ ಜೀವನದಲ್ಲೇ 'ಪ್ರಜಾವಾಣಿ' ಕಥಾಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆಯುತ್ತಿದ್ದರು ಅಂತ ಕೇಳಿದ್ದೆ. ಹೌದಲ್ಲ?' ಎಂದು ಪ್ರಶ್ನಿಸಿದರು.

'ಎಸ್, ಯು ಆರ್ ಕರೆಕ್ಟ್' ಎಂದು ಮುಗುಳ್ನಕ್ಕ ರಾಯರು 'ಒಂದು ಸಲ ವಿದ್ಯಾರ್ಥಿ ಕಥಾಸ್ಪರ್ಧೆಯ ತೀರ್ಪುಗಾರರಲ್ಲಿ ನಾನೂ ಒಬ್ಬನಾಗಿ ಇದ್ದೆ. ಆಗ ಸಾಪ್ತಾಹಿಕದಲ್ಲಿ ನಾನು ಪುಸ್ತಕ ವಿಮರ್ಶೆ ಮಾಡುತ್ತಿದ್ದುದರಿಂದ ಸಾಪ್ತಾಹಿಕ ವಿಭಾಗದ ಸಂಪಾದಕರಿಗೆ ನನ್ನ ಬಗ್ಗೆ ವಿಶೇಷ ಪ್ರೀತಿ ವಿಶ್ವಾಸ ಇತ್ತು. ಅವರು ನಿವೃತ್ತರಾಗುವಷ್ಟರಲ್ಲೇ ನಾನು ಪತ್ರಿಕೆಗಳಲ್ಲಿ ವಿಮರ್ಶೆ ಮಾಡುವುದನ್ನೂ ನಿಲ್ಲಿಸಿಬಿಟ್ಟೆ. ನಿನಗೆ ಹೇಳುವುದಾದರೆ ಆ ಸಂದರ್ಭದಲ್ಲಿ ನನ್ನದೊಂದು ಕತೆ ದೀಪಾವಳಿ ವಿಶೇಷಾಂಕದಲ್ಲಿ ಬಂದಿತ್ತು. ಒಟ್ಟು ನಾಲ್ಕೋ ಐದೋ ಕತೆಗಳನ್ನಷ್ಟೇ ನಾನು ಬರೆದದ್ದು' ಎಂದಾಗ ಜಯಂತಿ 0 'ಅಲ್ಲ ಅಣ್ಣ ನೀವು ಕತೆ ಬರೆಯುವುದನ್ನು ಮುಂದುವರಿಸಿದ್ದರೆ ಖಂಡಿತ ಒಳ್ಳೆ ಕತೆಗಳು ಕನ್ನಡಕ್ಕೆ ದಕ್ಕುತ್ತಿದ್ದವು' ಎಂದು ನಕ್ಕಳು. 'ಈಗಲಾದರೂ ಬರೆಯಬಹುದಲ್ಲ ನೀವು? ಸೀತಾಪುರದದಲ್ಲಿ ಫುಲ್ ಫ್ರೀಡಂ ಇದೆ ನಿಮಗೆ' ಎಂಬ ಮಾತನ್ನೂ ಸೇರಿಸಿದಳು.

ರಾಯರು ಅದಕ್ಕೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. 'ಬಹಳ ದಿನಗಳಾಯಿತು ಇಂಥ ಸಾರು ಊಟ ಮಾಡದೆ! ಇನ್ನೊಂದಿಷ್ಟು ಹಾಕು' ಎನ್ನುತ್ತಾ ಸಾರಿನಲ್ಲೇ ಊಟ ಮುಗಿಸಿ, 'ಒಂದು ಲೋಟ ಮಜ್ಜಿಗೆ ಕೊಡು' ಎಂದು ತೇಗುತ್ತಾ ಮೇಲೆದ್ದರು.

ರಾತ್ರೆ ಒಂಭತ್ತರ ಸುಮಾರಿಗೆ ಜಯಂತಿ ರಾಯರಿಗೆ ಹಾಸಿಗೆಯನ್ನು ಸಿದ್ಧಪಡಿಸಿದಳು. ರಾತ್ರೆ ಬಾಯಾರಿಕೆ ಆದರೆ ಇರಲಿ ಎಂಬಂತೆ ಒಂದು ತಂಬಿಗೆಯಲ್ಲಿ ನೀರನ್ನೂ ತಂದಿಟ್ಟಳು. 'ಅಣ್ಣ ನೀವು ಈಗ ಮಲಗಿಕೊಳ್ಳಿ, ಅಥವಾ ಕತೆ ಓದಿ. ನಾನು ಮಗಳಿಗೆ ಫೋನು ಮಾಡುವ ಕಾರ್ಯಕ್ರಮ ಇದೆ. ಹಾಗೇ ನಮ್ಮ ಕಾಲೇಜು ಮೆಗಜಿನ್‌ನ ಪ್ರೂಫ್ ಕರೆಕ್ಷನ್ ಮಾಡಬೇಕಿದೆ' ಎನ್ನುತ್ತಾ ರಾಯರು ಆ ಕೋಣೆ ಪ್ರವೇಶಿಸುತ್ತಿದ್ದ ಹಾಗೇ ತನ್ನ ಬೆಡ್‌ರೂಮಿನಾಚೆ ನಡೆದಳು.

ರಾಯರು ಉದ್ದಕ್ಕೂ ಹಾಸಿಗೆಯಲ್ಲಿ ಮಲಗಿಕೊಂಡು, 'ಕತೆಯಿಲ್ಲದ ಕತೆ ಕತೆಯಾದ ಕತೆ'ಯನ್ನು ಕೈಗೆತ್ತಿಕೊಂಡರು. ನೀಳ್ಗತೆಯ ಸ್ವರೂಪದಲ್ಲಿದ್ದ ಆ ಬರವಣಿಗೆ ರಾಯರಿಗೆ ತುಂಬಾ ಇಷ್ಟವಾಯಿತು. ಒಮ್ಮೆ ಎದ್ದು ಕುಳಿತು, ಇನ್ನೊಮ್ಮೆ ಉದ್ದಕ್ಕೂ ಮಲಗಿ ಮತ್ತೊಮ್ಮೆ ಮಗ್ಗುಲಿಗೆ ಹೊರಳಿ ಆಮೇಲೆ ಅಂಗಾತ ಬಿದ್ದುಕೊಂಡು ಆ ಕತೆಯನ್ನು ಅವರು ಓದುತ್ತಾ ಹೋದರು. ಸ್ವಲ್ಪ ಹೊತ್ತಿನಲ್ಲಿ ಆ ಕತೆಯ ಹಾಳೆಗಳು ರಾಯರ ಎದೆಯ ಮೇಲೆ ಬಿದ್ದರೂ ಮತ್ತೂ ಓದುತ್ತಲೇ ಹೋಗಿ ಅವರು ನಿದ್ದೆ ಹೋದರು.

ನಡುರಾತ್ರೆಯ ಹೊತ್ತಿಗೆ ದಿಢೀರಾಗಿ ರಾಯರಿಗೆ ಎಚ್ಚರವಾಯಿತು. 'ಅರೇ' ಎಂದು ರಾಯರು ಎದ್ದು ಕುಳಿತು 'ಲೈಟೂ ಆರಿಸದೇ ಪೂರ್ತಿ ಕತೆಯನ್ನೂ ಓದದೇ ನಿದ್ದೆ ಹೋಗಿದ್ದೆನಲ್ಲ ನಾನು!' ಎಂದುಕೊಂಡು ಕತೆಯ ಹಾಳೆಗಳನ್ನೆಲ್ಲ ಒಪ್ಪವಾಗಿ ಹೊಂದಿಸಿಟ್ಟರು. ವಾಶ್‌ರೂಮಿಗೆ ಹೋಗಿ ಬಂದು ಒಂದು ಲೋಟ ನೀರು ಕುಡಿದು ಲೈಟ್ ಆಫ್ ಮಾಡಿ ಹಾಸಿಗೆಗೆ ಉರುಳುತ್ತಿದ್ದ ಹಾಗೆ ಅವರಿಗೆ ಇದ್ದಕ್ಕಿದ್ದ ಹಾಗೆ ಈ ಕತೆಯ ನಾಯಕಿಗೂ ತನ್ನ ಅಮ್ಮನ ಬದುಕಿಗೂ ಏನೋ ಸಾಮ್ಯತೆ ಇದೆಯೇ? ಎಂದು ಅನಿಸತೊಡಗಿತು. ಅಮ್ಮ ಯಾವಾಗಲೂ ಹೇಳುತ್ತಿದ್ದ ತನ್ನ ಬವಣೆಗಳೆಲ್ಲ ಇದೇ ಈಗ ಕಣ್ಣೆದುರು ಕಾಣುತ್ತಿರುವ ಹಾಗೆ ಆಗಿ, ಈ ಕತೆ ಯಾಕೆ ತನ್ನ ಅಮ್ಮನನ್ನು ನೆನಪಿಸಿಕೊಳ್ಳುವ ಹಾಗೆ ಮಾಡುತ್ತಿದೆ ಎಂದು ಅವರು ಯೋಚಿಸಹತ್ತಿದರು.

ರಾಯರು ಹುಟ್ಟಿದ್ದು ಸೀತಾಪುರದಿಂದ ಸುಮಾರು ಇಪ್ಪತ್ತೆದು ಮೈಲು ದೂರವಿರಬಹುದಾದ ಕಣಪನ ಹಿತ್ಲು ಗ್ರಾಮದಲ್ಲಿ. ಕರಾವಳಿಯ ಬಹುತೇಕ ಗ್ರಾಮಗಳಲ್ಲಿ ಇರುವ ಹಾಗೆ ಆ ಊರಲ್ಲೂ ಒಂದು ದೇವಸ್ಥಾನ ಇದ್ದು, ಆ ದೇವಸ್ಥಾನದ ಪ್ರಧಾನ ಅರ್ಚಕ ಈಶ್ವರ ಭಟ್ಟರು ಅರ್ಚಕರಷ್ಟೇ ಆಗಿರದೆ ಮಂತ್ರವಾದಿ ಎಂದೂ ಪ್ರಸಿದ್ಧರಿದ್ದರು. ಮಂತ್ರವಾದಿ ಅಂದರೆ ತಂತ್ರಶಾಸ್ತ್ರವನ್ನು ಬಲ್ಲವರು ಎಂದು ತುಳು ಭಾಷಿಕರು ಪರಿಭಾವಿಸಿಕೊಂಡ ಗೌರವದ ಹೆಸರು ಅವರಿಗಿತ್ತು.

ತಂತ್ರ ವಿದ್ಯೆಯೆನ್ನುವುದು ಆ ದಿನಗಳಲ್ಲಿ ಕಣಪನ ಹಿತ್ಲು ಗ್ರಾಮದ ಈಶ್ವರ ಭಟ್ಟರನ್ನು ಬಿಟ್ಟರೆ ಪಕ್ಕದ ಹತ್ತಾರು ಫಾಸಲೆಗಳಲ್ಲಿ ಕಾಣಸಿಗದ ಒಂದು ಅಪರೂಪದ ವಿದ್ಯೆ. ಭಟ್ಟರು ತನ್ನ ತಂದೆಯವರಿಂದಲೇ ದೇವಸ್ಥಾನದ ಅರ್ಚನೆಗೆ ಸಂಬಂಧಪಟ್ಟ ಮಂತ್ರಗಳನ್ನು ಕಲಿತು ಮುಗಿಯಿತು ಎನ್ನುವಷ್ಟರಲ್ಲಿ ಕೇರಳದಲ್ಲಿನ ಐಕೋಡು ಗ್ರಾಮದ ದೇವಸ್ಥಾನದಲ್ಲಿ ಅರ್ಚಕರಾಗಿರುವ ಈಶ್ವರ ಭಟ್ಟರ ಭಾವ ರಾಧಾಕೃಷ್ಣ ಪೋತಿ ನಾಲ್ಕು ವರುಷದ ನಂತರ ದಿಢೀರಾಗಿ ಎನ್ನುವಂತೆ ತನ್ನ ಊರು ಸಾಂತೂರಿಗೆ ಬಂದಿದ್ದರು. ಬಂದವರು ಅಕ್ಕ ಮತ್ತು ಭಾವನನ್ನು 'ನೋಡಿ ಹೋಗೋಣ' ಎಂದು 'ಕಣಪನಹಿತ್ಲು'ಗೂ ಬಂದರು. ಅವರು ಎರಡು ದಿನ ಭಾವನ ಮನೆಯಲ್ಲೇ ಉಳಿದಿದ್ದಾಗ ಈಶ್ವರಭಟ್ಟರು ತನ್ನ ಭಾವ ಪೋತಿಯಲ್ಲಿ, 'ಈ ಮಾಣಿ ಏನು ಕಲಿಯಬೇಕೋ ಆ ತಂತ್ರ ಮಂತ್ರಗಳನ್ನೆಲ್ಲ ಇಲ್ಲಿ ಕಲಿತಾಗಿದೆ ಭಾವ. ಇನ್ನು ನೀವುಂಟು, ನಿಮ್ಮ ಅಳಿಯ ಇದ್ದಾನೆ' ಎಂದು ಹೇಳಿ, 'ಬರೇ ದೇವರ ಪೂಜೆ ಗೀಜೆ ಮಾಡಿದರೆ ಈ ಕಾಲದಲ್ಲಿ ಹೇಗೆ ಹೊಟ್ಟೆ ತುಂಬುತ್ತದೆ ಭಾವ? ಸ್ವಲ್ಪ ಕೇರಳದ ತಂತ್ರ ವಿದ್ಯೆಯನ್ನು ಕಲಿತರೆ ಒಳ್ಳೆಯದಲ್ಲವಾ? ನೀವು ಯಾಕೆ ನಿಮ್ಮ ಜೊತೆ ಇವನನ್ನೂ ಐಕೋಡಿಗೆ ಕರಕೊಂಡು ಹೋಗಬಾರದು?' ಎಂಬ ಅಭಿಪ್ರಾಯ ಮುಂದಿಟ್ಟರು.

'ಅದು ಹೌದು ಭಾವ' ಎಂದು ಪೋತಿಯವರು 'ಈ ತಂತ್ರಶಾಸ್ತ್ರದಲ್ಲಿ ಎರಡು ಪ್ರಕಾರಗಳಿವೆ' ಎಂದು ಹೇಳಿದವರೇ 'ಮೊದಲನೆಯದ್ದು ಲೋಕಕಲ್ಯಾಣದ ಉದ್ದೇಶದ್ದು. ಎರಡನೆಯದ್ದು ಸ್ವಾರ್ಥಕ್ಕಾಗಿ ಭೂತ ಪಿಶಾಚಿಗಳನ್ನು ಒಲಿಸಿಕೊಂಡು ಶೋಷಣೆಯ ಮೂಲಕ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿಕೊಳ್ಳುವಂಥಾದ್ದು' ಎಂದು ಅವುಗಳ ಮಾಹಿತಿ ನೀಡಿ, ಆಮೇಲೆ 'ನಾನಿರುವ ಸ್ಥಳದಲ್ಲಿ ಅಂದರೆ ಐಕೋಡಿನಲ್ಲಿ ಮೊದಲನೆಯದ್ದರ ಬಗ್ಗೆ ವಿಶೇಷ ಅನುಭವ ಇರುವ ತಾಂತ್ರಿಕ ಕೇಳು ನಂಬಿಯಾರ್ ಎನ್ನುವವರೊಬ್ಬರಿದ್ದಾರೆ. ಅವರನ್ನು ಕೇಳಿದರೆ 'ಇಲ್ಲ ಅನ್ನಲಾರರು. ಆದರೆ ಆ ವಿದ್ಯೆ ಕಲಿಯುವುದು ಅಷ್ಟು ಸುಲಭದ್ದಲ್ಲ. ಅದು ಪ್ರಕೃತಿಯ ಜೊತೆ ಸಂಘರ್ಷದಿಂದ ಇಚ್ಛಿತ ಫಲ ಪಡೆಯುವ ಸಾಹಸ. ರಹಸ್ಯ ಶಕ್ತಿಗಳನ್ನು ಹೊರಗೆಳೆದು ತನ್ನಂತೆ ಮಾಡಿಕೊಳ್ಳಲು ಬಳಸುವ ಜಾಣ್ಮೆಯ ತಂತ್ರ. ಈ ವಿದ್ಯೆಯ ಅಭ್ಯಾಸದ ಸಮಯದಲ್ಲಿ ಅನೇಕ ಅಡಚಣೆಗಳು ಬರಬಹುದು. ಇದರಿಂದ ಸಾಧಕನಿಗೆ ಕೆಲವು ಸಂದರ್ಭಗಳಲ್ಲಿ ಗಾಸಿಯಾಗುವ ಸಂಭವವೂ ಇರಬಹುದು. ಆದರೆ ಹಟ ಹಿಡಿದು ಸಾಧನೆ ಮಾಡಿದರೆ ಖಂಡಿತವಾಗಿಯೂ ಅದೊಂದು ಅದ್ಭುತ ವಿದ್ಯೆ' ಎಂದು ತಂತ್ರಶಾಸ್ತ್ರದ ಬಗ್ಗೆ ಪುಟ್ಟ ಉಪನ್ಯಾಸ ನೀಡಿ 'ಈ ಮಾಣಿಯ ಧೈರ್ಯವನ್ನು ಅವಲಂಬಿಸಿ ಆ ವಿದ್ಯೆಯನ್ನು ಕರತಲಮಾಡಿಕೊಳ್ಳಬಹುದು. ಆದರೆ